**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. 228/2020**

| | | |
|---|---|---|
| ಸಾಕ್ಷಿಯ ಹೆಸರುಃ | ಕಮಲ | ಫ್ರಾಸಾಃಃ 2 |
| ಗಂಡನ ಹೆಸರುಃ | ಹನುಮಾಬೋವಿ | ಚಾಸಾಃಃ 2 |
| ವಯಸ್ಸುಃ | 43 ವರ್ಷ | ಪ್ರಮಾಣೀಕರಿಸಿದ<br>ದಿಃ 17/07/2023 |
| ಉದ್ಯೋಗಃ | ಅಡುಗೆ ಸಹಾಯಕರು | |
| ವಾಸಸ್ಥಳಃ | ಕುಮಾರಿಕೊಪ್ಪಲು ಗ್ರಾಮ,<br>ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ** ಮಾನ್ಯ ಸಸಅ **ರಿಂದಃ**

ನಾನು 2003 ನೇ ಸಾಲಿನಿಂದ ಇಲ್ಲಿಯವರೆಗೆ ವಡ್ಡರ ಬೈಲಕುಪ್ಪೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಡುಗೆ ಸಹಾಯಕಳಾಗಿ ಕೆಲಸ ನಿರ್ವಹಿಸುತ್ತಿರುತ್ತೇನೆ.

2.ದಿಃ09/09/2019 ರಂದು ಬೆಳಿಗ್ಗೆ 9.00 ಗಂಟೆಗೆ ಶಾಲೆಗೆ ಕರ್ತವ್ಯಕ್ಕೆ ಹಾಜರಾದೆವು. ಆಗ ಅಲ್ಲಿ ಫ್ರಾಸಾ-1 ರವರು ಮತ್ತು ಚಾಸಾ-3 ರವರು ಹಾಜರಿದ್ದರು. ಆಗ ಅಲ್ಲಿ ನೋಡಿದಾಗ ಶಾಲಾ ಕಚೇರಿ, ಅಡುಗೆ ಮನೆ ಮತ್ತು ಬೀರುವಿನ ಬೀಗಗಳನ್ನು ಹೊಡೆದು ಹಾಕಿದ್ದರು. ಅಲ್ಲಿದ್ದ ವಸ್ತುಗಳೆಲ್ಲವೂ ಚೆಲ್ಲಾಪಿಲ್ಲಿಯಾಗಿದ್ದವು ಮತ್ತು 2 ಗ್ಯಾಸ್ ಸಿಲಿಂಡರ್, 50 ಕೆಜಿ ತೂಕದ ಒಂದು ಮೂಟೆ ಅಕ್ಕಿ, 1 ಕೆಜಿ ತೂಕದ 5 ಹಾಲಿನ ಪುಡಿಯ ಪ್ಯಾಕೇಟುಗಳು ಕಳುವಾಗಿದ್ದವು. ತಕ್ಷಣ ಫ್ರಾಸಾ-1 ರವರು ಬೆಟ್ಟದಪುರ ಪೊಲೀಸ್ ಠಾಣೆಗೆ ಹೋಗಿ ಸದರಿ ವಿಚಾರವಾಗಿ ದೂರನ್ನು ನೀಡಿರುತ್ತಾರೆ. ನಾನು ಪೊಲೀಸರಿಗೆ ಈ ವಿಚಾರದ ಬಗ್ಗೆ ಹೇಳಿಕೆ ನೀಡಿದ್ದೇನೆ. ನಾನು ಸಿಲಿಂಡರ್ ಮತ್ತು ಬೀಗವನ್ನು ನೋಡಿದರೆ ಗುರುತಿಸುತ್ತೇನೆ ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ

**ಮು.ಮಾ.1** ರಿಂದ **3** ಎಂದು ಗುರುತಿಸಲಾಗಿದೆ. ನಾನು ಪೊಲೀಸರ ಮುಂದೆ ಮರು ಹೇಳಿಕೆ ನೀಡಿದ್ದೇನೆ. ಪೊಲೀಸರು ನನ್ನನ್ನು ಠಾಣೆಗೆ ಕರೆಸಿ ಆರೋಪಿತನ್ನು ತೋರಿಸಿರುತ್ತಾರೆ. ಅವರು ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ.

**ಪಾಟೀ ಸವಾಲುಃ** ಆರೋಪಿತರ **ಪರ ಶ್ರೀ ಹೆಚ್.ಕೆ.ಎಸ್. ವಕೀಲರಿಂದಃ**

3. ಶನಿವಾರದಂದು ಶಾಲೆಯನ್ನು ನಾನು 10.30 ಗಂಟೆಗೆ ಬಿಟ್ಟಿರುತ್ತೇನೆ. ನಾನು ಶಾಲಾ ನಿಯಮದ ಪ್ರಕಾರ ಸೋಮವಾರದಿಂದ ಶುಕ್ರವಾರದ ವರೆಗೆ ಬೆಳಿಗ್ಗೆ 9.00 ರಿಂದ 2.30, ಶನಿವಾರ ಬೆಳಿಗ್ಗೆ 8.00 ರಿಂದ 10.30 ಗಂಟೆ ಸಮಯದವರೆಗೆ ಶಾಲೆಯಲ್ಲಿ ಇರಬೇಕಾಗಿರುತ್ತದೆ. ಶನಿವಾರದಂದು ಸುಮಾರು 25 ಮಕ್ಕಳು ಹಾಜರಿದ್ದರು. ಅಂದು ನಾವು ಪಲಾವ್ ಮಾಡಿದ್ದೆವು. ಸುಮಾರು 2 ವರೆ ಕೆಜಿ ಅಕ್ಕಿ ಹಾಕಿ ಪಲಾವ್ ಮಾಡಿದ್ದೆವು. ಅಡುಗೆ ಮನೆಯಲ್ಲಿರುವ ಅಕ್ಕಿಯನ್ನು ನಾನೇ ತೆಗೆದುಕೊಂಡು ಅಡುಗೆ ಮಾಡುತ್ತೇನೆ. ನಾವು ಪಲಾವ್ ಮಾಡಿದ ನಂತರ ಉಳಿದ 50 ಕೆಜಿ ಅಕ್ಕಿ ಮೂಟೆ ಇತ್ತು, ಅದು ಬಿಟ್ಟರೇ ಬೇರೆ ಅಕ್ಕಿ ಇರಲಿಲ್ಲ. ಮುಖ್ಯ ಶಿಕ್ಷಕರು ಕಚೇರಿಯ ಬೀಗವನ್ನು ತೆಗೆದು ಒಳಗೆ ಹೋದರು. ಸಾಕ್ಷಿ ಪುನಃ ಆ ದಿನ ಬೀಗ ಅದುಮಿದ್ದರು, ಆದರೆ ಲಾಕ್ ಮಾಡಿರಲಿಲ್ಲ ಎಂದು ನುಡಿಯುತ್ತಾರೆ. ಬೀರುವಿನ ಬಾಗಿಲು ತೆಗೆದಿದ್ದರು ಮತ್ತು ಅದರಲ್ಲಿದ್ದ ಕಡತಗಳು ಚೆಲ್ಲಾಪಿಲ್ಲಿಯಾಗಿತ್ತು. ಅಡುಗೆ ಮನೆಗೆ ಮುಖ್ಯ ಶಿಕ್ಷಕರು ಮೊದಲು ಹೋದರು, ನಂತರ ನಾವು ಹೋದೆವು. ಆ ದಿನ 50 ಕೆಜಿ ತೂಕದ ಒಂದು ಮೂಟೆ ಅಕ್ಕಿ, 1 ಕೆಜಿ ತೂಕದ 5 ಹಾಲಿನ ಪುಡಿಯ ಪ್ಯಾಕೇಟುಗಳು ಮತ್ತು 2 ಸಿಲಿಂಡರುಗಳು ಕಳುವಾಗಿದ್ದವು. ಒಂದು ತುಂಬಿದ ಸಿಲಿಂಡರ್ ಮತ್ತು ಒಂದು ಖಾಲಿ ಸಿಲಿಂಡರ್ ಇತ್ತು. ಮುಖ್ಯ ಶಿಕ್ಷಕರು ಸುಮಾರು 7-8 ಜನರನ್ನು ಕರೆಸಿದ್ದರು. ಗೋವಿಂದಸ್ವಾಮಿ ಎಂಬ, ಎಸ್.ಡಿ.ಎಂ.ಸಿ. ಅಧ್ಯಕ್ಷರು ಸ್ಥಳಕ್ಕೆ ಬಂದಿದ್ದರು. ಬೇರೆಯವರ ಹೆಸರು ಗೊತ್ತಿಲ್ಲ. ನಾನು ಅದೇ ಊರಿನವರು ಅಲ್ಲ. ಈ ವಿಷಯವಾಗಿ ಎಸ್.ಡಿ.ಎಂ.ಸಿ ಅಧ್ಯಕ್ಷರ ಜೊತೆ ಚರ್ಚೆ ಮಾಡಿದರು.

4. ಇಬ್ಬರು ಪೊಲೀಸರು ಮಾರನೇ ದಿನ ಸ್ಥಳಕ್ಕೆ ಬಂದಿದ್ದರು. ಪೊಲೀಸರು ಮಧ್ಯಾಹ್ನ ಬಂದಿದ್ದರು. ಪೊಲೀಸರು ಬಂದಾಗ ನಾನು ಮತ್ತು ಶಿಕ್ಷಕರು ಇದ್ದೆವು, ಬೇರೆ ಊರಿನವರು

ಇರಲಿಲ್ಲ. ಮಾರನೇ ದಿನ ಪೊಲೀಸರು ಬಂದಾಗ ಎಸ್.ಡಿ.ಎಂ.ಸಿ. ಅಧ್ಯಕ್ಷರು ಬಂದಿರಲಿಲ್ಲ. ನನ್ನ ಸಮಕ್ಷಮ ಪೊಲೀಸರು ಬೀಗವನ್ನು ಅಮಾನತ್ತು ಪಡಿಸಿಕೊಂಡರು. ಬೀಗದ ಕಂಪನಿಯ ಹೆಸರು ಗೊತ್ತಿಲ್ಲ. ಯಾರು ಕಳುವು ಮಾಡಿದ್ದರು ಎಂದು ಖುದ್ದಾಗಿ ಮಾಹಿತಿ ಇಲ್ಲ. ಆರೋಪಿತ ಯಾವುದೇ ತಪ್ಪು ಮಾಡದಿದ್ದರೂ ಸಹ ಮುಖ್ಯ ಶಿಕ್ಷಕರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಮು.ಮಾ.1 ನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಶಾಲೆಯಲ್ಲಿ ಕಳ್ಳತನ ಆಗಿರಲಿಲ್ಲ ಎಂದರೂ ಸಹ ಅಂಕಿ ಅಂಶಗಳನ್ನು ಸರಿ ಪಡಿಸಲು ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನನಗೆ ಆರೋಪಿತನ ಪರಿಚಯ ಇಲ್ಲ. ನಾನು ನ್ಯಾಯಾಲಯದಲ್ಲಿ ಆರೋಪಿತನ್ನು ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಆರೋಪಿತನ್ನು ತೋರಿಸಿಕೊಟ್ಟ ನಂತರ ಆರೋಪಿತ ಈತನೇ ಎಂದು ಗೊತ್ತಾಯಿತು. ನನಗೆ ಆರೋಪಿತನ ಹೆಸರು, ವಿಳಾಸ ಮತ್ತು ಕೆಲಸದ ಬಗ್ಗೆ ತಿಳಿಸಲಿಲ್ಲ. ಆರೋಪಿತನನ್ನು ಬಿಟ್ಟು ಪೊಲೀಸರು ಬೇರೆ ವಸ್ತುಗಳನ್ನು ತೋರಿಸಲಿಲ್ಲ. ನಾನು ಆರೋಪಿತನಿಗೆ ತೊಂದರೆ ಕೊಡಲು ಮುಖ್ಯ ಶಿಕ್ಷಕರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.